ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 5–12–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 59ನೇ ಮಹಾಪರಿನಿರ್ವಾಣ ದಿನ:<br>ಪುತ್ಥಳಿಗೆ ಮಾಲಾರ್ಪಣೆ:<br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br>ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಹಾಗೂ ಹಿಂದುಳಿದ ಕಲ್ಯಾಣ ಸಚಿವರು. | **06–12–2015**<br>ಭಾನುವಾರ<br>ಬೆಳಿಗ್ಗೆ<br>**9–30** ಗಂಟೆಗೆ | ವಿಧಾನಸೌಧ ಮುಂಭಾಗ, ಬೆಂಗಳೂರು. |
| **2.** | **Unveiling of the Foundation plaque of the NIMHANS Integrated Centre for Yoga:**<br>**Special Address:**<br>**His Holiness the 14th Dalai Lama** | **7–12–2015**<br>**Monday**<br>**at**<br>**1-30 PM** | **Convention Centre, NIMHANS, Bengaluru** |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಆಟೋ ರಿಕ್ಷಾ ಮೀಟರ್ " 106 ಮೊಕದ್ದಮೆ ದಾಖಲು

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ಕಾನೂನು ಮಾಪನಶಾಸ್ತ್ರ ಇಲಾಖೆಯು ಆಟೋ ಮತ್ತು ಟ್ಯಾಕ್ಸಿ ಘಟಕದವರು ನವೆಂಬರ್ 19 ರಿಂದ 25 ರವರೆಗೆ ಬೆಂಗಳೂರಿನ ಪ್ರಮುಖ ಸ್ಥಳಗಳಲ್ಲಿ ಅನಿರೀಕ್ಷಿತ ತಪಾಸಣೆಯನ್ನು ಕೈಗೊಂಡು 756 ಆಟೋ ರಿಕ್ಷಾದರ ಮೀಟರ್‌ಗಳನ್ನು ತಪಾಸಣೆ ಮಾಡಿ ಒಟ್ಟು 106 ಮೊಕದ್ದವಮೆಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಜರುಗಿಸಿದೆ.

ಆಟೋ ರಿಕ್ಷಾ ಮಾಲೀಕರು/ಚಾಲಕರುಗಳು ದರ ಮೀಟರ್‌ಗಳ ಸತ್ಯಾಪನೆ ಅವಧಿ ಮುಗಿದ ಕೂಡಲೇ ಕ್ಷೇತ್ರವಾರು ನಿರೀಕ್ಷಕರುಗಳ ಕಚೇರಿಗೆ ಹಾಜರುಪಡಿಸಿ ಸತ್ಯಾಪನೆ ಹಾಗೂ ಮುದ್ರೆ ಮಾಡಿಸಿಕೊಂಡು, ಆ ನಂತರ ಸಾರ್ವಜನಿಕರ ಸೇವೆಗಾಗಿ ಉಪಯೋಗಿಸಬೇಕಾಗಿದೆ. ಸತ್ಯಾಪನೆ ಮುದ್ರೆ ಆಗದ ದರ ಮೀಟರ್‌ಗಳನ್ನು ಉಪಯೋಗಿಸಿ ಸಾರ್ವಜನಿಕರಿಂದ ದರ ಪಡೆಯುವುದು ನಿಯಮ ಬಾಹಿರವಾಗಿದ್ದು ಇಂತಹವರ ಮೇಲೆ ಕಠಿಣ ಕ್ರಮ ಜರುಗಿಸಲಾಗುವುದು.

ಸಾರ್ವಜನಿಕರು/ಗ್ರಾಹಕರು ಇಂತಹ ಪ್ರಕರಣಗಳನ್ನು ಗಮನಿಸಿದಲ್ಲಿ ಇಲಾಖೆಗೆ ಇ-ಮೇಲ್ ಅಥವಾ ದೂರವಾಣಿ ಸಂಖ್ಯೆ : 080-22342380/22260554/22207750 ಮೂಲಕ ದೂರು ನೀಡಲು ಕೋರಿದೆ.

ಪಲ್ಲವಿ:ಬಾಬು:ಜಿಪಿಆರ್

## ದೇವರಾಜ ಅರಸು ಆಶಯ ಗೀತೆಗೆ ಆಹ್ವಾನ

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಸರ್ಕಾರ 2015-16 ನೇ ವರ್ಷವನ್ನು ಡಿ. ದೇವರಾಜು ಅರಸು ಅವರ ಶತಮಾನೋತ್ಸವ ವರ್ಷವನ್ನಾಗಿ ಆಚರಿಸುತ್ತಿದೆ. ಇಂತಹ ಮಹಾನ್ ವ್ಯಕ್ತಿಯನ್ನು ಕುರಿತು ಅವರ ಶತಮಾನೋತ್ಸವ ಸಂದರ್ಭದಲ್ಲಿ ಅವರು ದರ್ಶಿಸಿದ ಕರ್ನಾಟಕವನ್ನು ಕುರಿತು ಒಂದು ಆಶಯ ಗೀತೆಯನ್ನು ರಚಿಸಿಕೊಡಬೇಕೆಂದು ಅರಸು ಶತಮಾನೋತ್ಸವ ಕಾರ್ಯಕಾರಿ ಸಮಿತಿ ಅಪೇಕ್ಷಿಸಿದೆ. ಅವರ ವ್ಯಕ್ತಿತ್ವ, ಸಾಧನೆ ಮತ್ತು ಹೊಸದಿಕ್ಕಿನ ಯೋಜನೆಗಳನ್ನು ಇಟ್ಟುಕೊಂಡು ಒಂದು ಆಶಯ ಗೀತೆಯನ್ನು ಕವಿಮನಸುಗಳಿಂದ ಅಪೇಕ್ಷಿಸಲಾಗಿದೆ.

ಆಯ್ಕೆಯಾದ ಗೀತೆಯನ್ನು ಧ್ವನಿ ಮುದ್ರಿಸಿ ಶತಮಾನೋತ್ಸವ ಕಾರ್ಯಕ್ರಮಗಳಲ್ಲಿ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಗೀತೆಯು ಒಂದು ಪಲ್ಲವಿ ಹಾಗೂ ನಾಲ್ಕು ಚರಣಗಳನ್ನು ಒಳಗೊಂಡಿರಬೇಕು. ಒಟ್ಟು ಅರಸು ಅವರ ಸಾಧನೆಯನ್ನು ಪ್ರತಿನಿಧಿಸುವ ಹಾಗೂ ಹಾಡಲು ಸುಲಲಿತವಾಗಿರುವಂತೆ ಇರಬೇಕು. ಗೀತೆಯ ಅಂತಿಮ ಆಯ್ಕೆ ಅರಸು ಶತಮಾನೋತ್ಸವ ಕಾರ್ಯಕಾರಿ ಸಮಿತಿಯ ತೀರ್ಮಾನಕ್ಕೆ ಒಳಪಟ್ಟಿರುತ್ತದೆ. ಆಯ್ಕೆಯಾದ ಗೀತೆಗೆ ಮಾತ್ರ ಸೂಕ್ತ ಸಂಭಾವನೆಯನ್ನು ಕೊಡಲಾಗುವುದು. ಗೀತೆಯ ಹಕ್ಕು ಅಂತಿಮವಾಗಿ ಶತಮಾನೋತ್ಸವ ಕಾರ್ಯಕಾರಿ ಸಮಿತಿಯದಾಗಿರುತ್ತದೆ.

ಹಿಂದುಳಿದ ವರ್ಗ ಮತ್ತು ಕಲ್ಯಾಣ ಇಲಾಖೆ, ದೇವರಾಜ ಅರಸು ಜನ್ಮ ಶತಮಾನೋತ್ಸವ ಕಾರ್ಯಕಾರಿ ಸಮಿತಿ, ಸಂಖ್ಯೆ 16–ಡಿ, ಮೂರನೇ ಮಹಡಿ, ಡಿ. ದೇವರಾಜ ಅರಸು ಭವನ, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು – 560 052 ವಿಳಾಸಕ್ಕೆ ಅಂಚೆ ಮೂಲಕ ಅಥವಾ ಮಿಂಚಂಚೆ **du100ecc@gmail.com** ಮೂಲಕ ಡಿಸೆಂಬರ್ 15 ರೊಳಗೆ ಸಲ್ಲಿಸಬಹುದು.

ಸಾಮಾಜಿಕ ಸಂಕೋಲೆಯಲ್ಲಿ ಸಿಕ್ಕಿ ನರಳುತ್ತಿದ್ದವರಿಗೆ ಪ್ರಜಾಪ್ರಭುತ್ವವನ್ನು ಕೊಟ್ಟರು. ದಕ್ಷಿಣ ಭಾರತ ಎಂದರೆ ಅಲ್ಲಿ ಕರ್ನಾಟಕದ ಗುರುತು. ಇಲ್ಲದಿದ್ದಾಗ ಭಾರತದ ಭೂಪಟದಲ್ಲಿ ದಕ್ಷಿಣ ಭಾರತವೆಂದರೆ ಕರ್ನಾಟಕ. ಅರಸು ಎಂದರೆ ದೇವರಾಜ ಅರಸು ಎನ್ನುವಂತಾಯಿತು.

ಪಲ್ಲವಿ:ಬಾಬು:ಜಿಪಿಆರ್

## ಕೆ.ಎ.ಟಿ.ಗೆ ಕ್ರಿಸ್‌ಮಸ್ ರಜೆ

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ನ್ಯಾಯಾಪೀಠ – 1 ರಿಂದ 8 ರವರೆಗೆ ಡಿಸೆಂಬರ್ 21 ರಿಂದ 31 ರವರೆಗೆ ಕ್ರಿಸ್‌ಮಸ್ ರಜೆಯನ್ನು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಡಿಸೆಂಬರ್ 21 ರಿಂದ 31 ರವರೆಗೆ ನ್ಯಾಯಾಧೀಕರಣದ ಎಲ್ಲಾ 8 ನ್ಯಾಯಾಪೀಠಗಳು "ಏಕ ಸದಸ್ಯ ಪೀಠ" ಗಳಾಗಿ ಕಾರ್ಯನಿರ್ವಹಿಸುತ್ತದೆ ಎಂದು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ನಿಬಂಧಕರು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಪಲ್ಲವಿ:ಬಾಬು:ಜಿಪಿಆರ್

## ನಕ್ಷತ್ರ ವೀಕ್ಷಣೆ ಕಾರ್ಯಕ್ರಮ

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ಬೆಂಗಳೂರಿನ ಹೈಗ್ರೌಂಡ್ಸ್ ಬಳಿಯ ಜವಾಹರ್ ಲಾಲ್ ನೆಹರೂ ತಾರಾಲಯದಲ್ಲಿ ಡಿಸೆಂಬರ್ 6 ರ ಭಾನುವಾರದಂದು ಸಂಜೆ 6–30 ಗಂಟೆಗೆ "ನಕ್ಷತ್ರ ವೀಕ್ಷಣೆ" ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದೂರವಾಣಿ ಸಂಖ್ಯೆ 2237 9725 ಅಥವಾ 2226 6084 ಅಥವಾ ಅಂತರ್ಜಾಲ **http://www.taralaya.org/monthly_sky_chart.php** ಅನ್ನು ಸಂಪರ್ಕಿಸಲು ಕೋರಿದೆ.

ಪಲ್ಲವಿ:ಬಾಬು:ಜಿಪಿಆರ್

# ರಾಷ್ಟ್ರಿಯ ಕೃಷಿ ವಿಮಾ ಯೋಜನೆ : ರೈತರಿಗೆ ಮಾಹಿತಿ

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ಕೃಷಿ ಇಲಾಖೆಯು ಬೆಳೆ ವಿಮಾ ಯೋಜನೆಗೆ ಸಂಬಂಧಪಟ್ಟಂತೆ ಸಾರ್ವಜನಿಕರ ಗಮನಕ್ಕೆ ಈ ಕೆಳಕಂಡ ಮಾಹಿತಿಯನ್ನು ತರಲು ಬಯಸುತ್ತದೆ.

2015–16 ಹಿಂಗಾರು ಹಂಗಾಮಿನಲ್ಲಿ ಹಾಗೂ ಬೇಸಿಗೆ ಹಂಗಾಮಿನಲ್ಲಿ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿಯಲ್ಲಿ ಎಲ್ಲಾ ಆಹಾರ ಮತ್ತು ಎಣ್ಣೆಕಾಳು ಬೆಳೆಗಳನ್ನು ಅಧಿಸೂಚಿಸಲಾಗಿದೆ.

ಇವುಗಳಲ್ಲಿ ತಾಲ್ಲೂಕುವಾರು ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ ಹಾಗೂ ಉಳಿದ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗಿದೆ. ಈ ಯೋಜನೆಯು ಬೆಳೆಸಾಲ ಪಡೆಯುವ ರೈತರಿಗೆ ಕಡ್ಡಾಯವಾಗಿದ್ದು, ಬೆಳೆಸಾಲ ಪಡೆಯದಂತಹ ರೈತರಿಗೆ ಐಚ್ಛಿಕವಾಗಿರುತ್ತದೆ.

ಇತರೆ ಬೆಳೆ ಸಾಲ ಪಡೆಯದ ರೈತರು ಯೋಜನೆಯಲ್ಲಿ ಪಾಲ್ಗೊಳ್ಳಲು ಹತ್ತಿರದ ಬ್ಯಾಂಕುಗಳನ್ನು ಸಂಪರ್ಕಿಸಿ ಅರ್ಜಿಯೊಂದಿಗೆ ಭೂಮಿ ಹೊಂದಿರುವುದಕ್ಕೆ ದಾಖಲಾತಿಗಳಾದ ಪಹಣಿ/ಖಾತೆ ಪತ್ರ/ಕಂದಾಯ ರಶೀದಿ ನೀಡಬೇಕು. ಗ್ರಾಮ ಲೆಕ್ಕಿಗರಿಂದ ಬಿತ್ತನೆ ದೃಢೀಕರಣ ಪತ್ರ ಪಡೆದು ನೀಡಬೇಕು. ಬ್ಯಾಂಕಿನಲ್ಲಿ ಖಾತೆಯನ್ನು ತೆರೆದು ವಿಮಾ ಕಂತನ್ನು ಕಟ್ಟಬೇಕು. ಯೋಜನೆಯಡಿ ಪಾಲ್ಗೊಳ್ಳುವ ಸಮಯದಲ್ಲಿ ಬೆಳೆ ಬಿತ್ತಿದ ಅಥವಾ ನಾಟಿ ಮಾಡಿದ ನಂತರ 30 ದಿವಸದೊಳಗಿನ ಹಗೂ ಆರೋಗ್ಯಕರವಾಗಿರುವ ಬೆಳೆಗಳನ್ನು ನೊಂದಾಯಿಸಬಹುದು.

ವಿಮಾ ಕಂತು–ಗೋಧಿ ಬೆಳೆಗೆ 1.5% ಹಾಗೂ ಉಳಿದ ಎಲ್ಲಾ ಅಹಾರ ಮತ್ತು ಎಣ್ಣೆಕಾಳು ಬೆಳೆಗಳಿಗೆ – 2.00% ಪಾವತಿಸಬೇಕಾಗುತ್ತದೆ. ಇದರಲ್ಲಿ ಬೆಳೆ ವಿಮಾ ಯೋಜನೆಯಡಿ ಒಲಪಡುವ ಎಲ್ಲಾ ಸಣ್ಣ/ಅತಿಸಣ್ಣ

ರೈತರಿಗೆ 10% ರಿಯಾಯಿತಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಎಲ್ಲಾ ರೈತರಿಗೆ ವಿಮಾ ಕಂತಿನಲ್ಲಿ ಶೇ 90 ರಷ್ಟು ರಿಯಾಯಿತಿಯನ್ನು ನೀಡಲಾಗುತ್ತದೆ.

ಹಿಂಗಾರು ಹಂಗಾಮಿನಲ್ಲಿ ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದೇ ಇರುವ ಎಲ್ಲಾ ರೈತರು ಪಾಲ್ಗೊಳ್ಳಲು ಕೊನೆಯ ದಿನಾಂಕ 31–12–2015 ಹಾಗು ಬೇಸಿಗೆ ಹಂಗಾಮಿನಲ್ಲಿ ಬೆಳೆಸಾಲ ಪಡೆಯದ ರೈತರು ಪಾಲ್ಗೊಳ್ಳಲು ಕೊನೆಯ ದಿನಾಂಕ 28–2–2016 ಹಗೂ ಬೆಳೆ ಸಾಲ ಪಡೆಯುವ ರೈತರು ಪಾಲ್ಗೊಳ್ಳಲು ಕೊನೆಯ ದಿನಾಂಕ : 31–03–2016 ಆಗಿರುತ್ತದೆ.

ಪ್ರಕೃತಿ ವಿಕೋಪ ಅಂದರೆ, ಆಲೀಕಲ್ಲು ಮಳೆ, ಪ್ರವಾಹ, ಭೂ ಕುಸಿತ ಮತ್ತು ಚಂಡಮಾರುತ ಇವುಗಳಿಂದ ಬೆಳೆ ನಷ್ಟ ಸಂಭಿಸಿದಲ್ಲಿ 2015–2016 ರ ಹಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲಿ ವೈಯಕ್ತಿಕವಾಗಿ ಬೆಳೆ ನಷ್ಟ ನಿರ್ಧರಿಸಿ ಬೆಳೆ ವಿಮಾ ನಷ್ಟ ಪರಿಹರವನ್ನು ನೀಡಲಾಗುವುದು. ಈ ಕಾರಣಗಳಿಂದ ನಷ್ಟ ಸಂಭವಿಸಿದರೆ ವಿಮೆ ಮಾಡಿಸಿದ ರೈತರು ಬೆಳೆ ನಷ್ಟವಾದ 48 ಗಂಟೆಯೊಳಗೆ ಅರ್ಜಿಯನ್ನು ಸಂಬಂಧಿತ ಬ್ಯಾಂಕಿನಲ್ಲಿ ಅಥವಾ ನೇರವಾಗಿ ಅಗ್ರಿಕಲ್ಚರ್ ಇನ್ಶೂರೆನ್ಸ್ ಕಂಪನೆ ಆಫ್ ಇಂಡಿಯಾ ಲಿ., ಬೆಂಗಳೂರು ಇವರಿಗೆ ನೀಡಬೇಕು. ಅರ್ಜಿಯಲ್ಲಿ ಬೆಳೆಯ ವಿವರಗಳನ್ನು ನಷ್ಟಕ್ಕೆ ಕಾರಣವನ್ನು ಹಾಗೂ ಬೆಳೆ ನಷ್ಟದ ವ್ಯಾಪ್ತಿಯ ವಿವರಗಳನ್ನು ನೀಡಬೇಕು. ವಿಮಾ ಸಂಸ್ಥೆಯು ವಿವರಗಳನ್ನು ಪಡೆದು ನಷದಟ ನಿರ್ಧಾರಕರನ್ನು ರೈತರ ಜಮೀನಿಗೆ ಕಳುಹಿಸಿಕೊಡುತ್ತಾರೆ.

ಈ ಅವಕಾಶವನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆ ವಿಮಾ ಯೋಜನೆಯಡಿಯಲ್ಲಿ ಪಾಲ್ಗೊಳ್ಳಲು ಈ ಮೂಲಕ ಕೋರಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ರೈತ ಸಂಪರ್ಕ ಕೇಂದ್ರ ಅಥವಾ ಬ್ಯಾಂಕುಗಳನ್ನು ಸಂಪರ್ಕಿಸುವುದು.

ಪಲ್ಲವಿ:ಜಿಪಿಆರ್

# ಪತ್ರಿಕೋದ್ಯಮ ವೃತ್ತಿ ಕೌಶಲ್ಯ ತರಬೇತಿ
# ಅರ್ಜಿ ಸಲ್ಲಿಸಲು ಡಿಸೆಂಬರ್ 11 ರವರೆಗೆ ಅವಧಿ ವಿಸ್ತರಣೆ

ಬೆಂಗಳೂರು, ಡಿಸೆಂಬರ್ 5 (ಕರ್ನಾಟಕ ವಾರ್ತೆ)

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು 2015-16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಪತ್ರಿಕೋದ್ಯಮ ಪದವೀಧರರಿಗೆ ಮುದ್ರಣ ಹಾಗೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ವೃತ್ತಿ ರೂಪಿಸಿಕೊಳ್ಳಲು ಅನುಕೂಲವಾಗುವಂತೆ ವೃತ್ತಿ ಕೌಶಲ್ಯ ತರಬೇತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಅರ್ಹರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಡಿಸೆಂಬರ್ 11 ರವರೆಗೆ ಅವಧಿ ವಿಸ್ತರಿಸಲಾಗಿದೆ.

ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ/ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ, ಪತ್ರಿಕೋದ್ಯಮ/ ವಿದ್ಯುನ್ಮಾನ ಮಾಧ್ಯಮ/ ಸಮೂಹ ಸಂವಹನ ವಿಷಯಗಳಲ್ಲಿ ಪದವಿ/ಸ್ನಾತಕ ಪದವಿ/ ಪಿಜಿ ಡಿಪ್ಲೊಮಾ ಪಡೆದಿರುವ, ಅಭ್ಯರ್ಥಿಗಳನ್ನು ಮೆರಿಟ್ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಯು ಈ ಹಿಂದೆ ಇದೇ ಸ್ವರೂಪದ ತರಬೇತಿಯನ್ನು ಸರ್ಕಾರದ ಯಾವುದೇ ಇಲಾಖೆಯಿಂದ ಪಡೆದಿರಬಾರದು.

ಅರ್ಜಿಯ ನಿಗದಿತ ನಮೂನೆಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಅಧಿಕೃತ ವೆಬ್‌ಸೈಟ್ www.karnatakavarthe.org ನಿಂದ ಡೌನ್‌ಲೋಡ್ ಮಾಡಿಕೊಂಡು ಸಂಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ (ಪತ್ರಾಂಕಿತ ಅಧಿಕಾರಿ (ಗೆಜ಼ೆಟೆಡ್) ಯ ದೃಢೀಕರಣದೊಂದಿಗೆ) ದಿನಾಂಕ 11-12-2015 ರೊಳಗಾಗಿ ಸಲ್ಲಿಸಬೇಕು. ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆಯಾದ ಅಭ್ಯರ್ಥಿ ಮೂಲ ದಾಖಲೆಗಳ ಪರಿಶೀಲನೆಗೆ ಗೈರುಹಾಜರಾದಲ್ಲಿ ಮೆರಿಟ್ ಆಧಾರದ ಮೇಲೆ ಮುಂದಿನ ಅಭ್ಯರ್ಥಿಗೆ ಅವಕಾಶ ನೀಡಲಾಗುವುದು.

ತರಬೇತಿಯು ಒಟ್ಟು ಏಳು ದಿನಗಳದ್ದಾಗಿದ್ದು, ಪ್ರಾರಂಭದಲ್ಲಿ ಸಂಪನ್ಮೂಲ ಕಿಟ್ ನೀಡಲಾಗುವುದು. ತರಬೇತಿ ಸಂಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಸ್ಟೈಪೆಂಡ್, ತರಬೇತಿ ಪ್ರಮಾಣ ಪತ್ರ ಹಾಗೂ ಲ್ಯಾಪ್‌ಟಾಪ್ (ಪ.ಜಾ/ಪ.ಪಂ ದ ಅಭ್ಯರ್ಥಿಗಳಿಗೆ) ಹಾಗೂ ಡಿಜಿಟಲ್ ಕ್ಯಾಮೆರಾ (ಒಬಿಸಿ ಅಭ್ಯರ್ಥಿಗಳಿಗೆ) ನೀಡಲಾಗುವುದು.

ಭರ್ತಿ ಮಾಡಿದ ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ 'ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ನಂ. 17, ವಾರ್ತಾ ಸೌಧ, ಭಗವಾನ್ ಮಹಾವೀರ್ ರಸ್ತೆ, ಬೆಂಗಳೂರು- 560001' ಹಾಗೂ ಅರ್ಜಿ ಹಾಗೂ ದಾಖಲೆಗಳ ಸಾಫ್ಟ್ (ಸ್ಕ್ಯಾನ್) ಕಾಪಿಯನ್ನು scpinformationdepartment@gmail.com ಗೆ ಇ-ಮೇಲ್ ಮಾಡಲು ಕೋರಿದೆ.

ಪಲ್ಲವಿ/ಕೆಎಂ/ಜಿಪಿಆರ್